# 3ನೇ ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗ 2024

ಆಗಸ್ಟ್ 14, 2024

ಭಾರತವು 2024ರ ಆಗಸ್ಟ್ 17ರಂದು 3ನೇ ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗವನ್ನು ಆಯೋಜಿಸಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್, ಮತ್ತು ಸಬ್‌ಕಾ  ಪ್ರಯಾಸ್' ಧ್ಯೇಯದ ಮುಂದುವರಿದ ಭಾಗವಾಗಿ ಈ ವಿಶಿಷ್ಟ ಉಪಕ್ರಮವು ಆರಂಭವಾಯಿತು. ಅಲ್ಲದೆ, ಇದು ಭಾರತದ ವಸುಧೈವ ಕುಟುಂಬಕಂ ತತ್ವವನ್ನು ಆಧರಿಸಿದೆ. ಜಾಗತಿಕ ದಕ್ಷಿಣದಲ್ಲಿರುವ ಎಲ್ಲ ದೇಶಗಳನ್ನು ಒಂದುಗೂಡಿಸಿ, ಒಂದೇ ಸೂರಿನಡಿ ಹಲವು ವಿಚಾರಗಳ ಕುರಿತು ತಮ್ಮ ದೃಷ್ಟಿಕೋನಗಳು ಮತ್ತು ಆದ್ಯತೆಗಳನ್ನು ಹಂಚಿಕೊಳ್ಳುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.

2. ಭಾರತವು ಮೊತ್ತಮೊದಲ ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗ(ವಿಒಜಿಎಸ್‌ಎಸ್)ವನ್ನು 2023ರ ಜನವರಿ 12-13ರಂದು, 2ನೇ ವಾಯ್ಸ್ ಆಫ್ ಗ್ಲೋಬಲ್ ಸೌತ್ ಶೃಂಗವನ್ನು 2023ರ ನವೆಂಬರ್ 17ರಂದು ವರ್ಚುವಲ್ ಮಾದರಿಯಲ್ಲಿ ಆಯೋಜಿಸಿತ್ತು. ಶೃಂಗದ ಈ ಹಿಂದಿನ ಎರಡೂ ಆವೃತ್ತಿಗಳಲ್ಲಿ ಜಾಗತಿಕ ದಕ್ಷಿಣದ ಸುಮಾರು 100 ದೇಶಗಳು ಭಾಗವಹಿಸಿದ್ದವು. ಈ ಎರಡು ಶೃಂಗಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಾಯಕರು ನೀಡಿದ ಮಾಹಿತಿಗಳು ಮತ್ತು ಪ್ರತಿಕ್ರಿಯೆಗಳು ಕಳೆದ ವರ್ಷ ಭಾರತದ ಅಧ್ಯಕ್ಷತೆಯಲ್ಲಿ ನಡೆದ ಜಿ-20 ಶೃಂಗದ ಅಜೆಂಡಾ ಹಾಗೂ ಚರ್ಚೆಗಳಲ್ಲಿ ಮತ್ತು ಜಿ-20 ನವದೆಹಲಿ ನಾಯಕರ ಘೋಷಣೆಗಳಲ್ಲಿ ಸೂಕ್ತವಾಗಿ ಪ್ರತಿಬಿಂಬಿಸಿದವು.

3. "ಸುಸ್ಥಿರ ಭವಿಷ್ಯಕ್ಕಾಗಿ ಸಬಲೀಕರಣಗೊಂಡ ಜಾಗತಿಕ ದಕ್ಷಿಣ" ಎಂಬ ಥೀಮ್‌ನೊಂದಿಗೆ ಈ ಬಾರಿ 3ನೇ ವಿಒಜಿಎಸ್‌ಎಸ್ ನಡೆಯಲಿದೆ. ಸಂಘರ್ಷಗಳು, ಆಹಾರ ಮತ್ತು ಇಂಧನ ಭದ್ರತೆ ಬಿಕ್ಕಟ್ಟುಗಳು, ಹವಾಮಾನ ಬದಲಾವಣೆ ಹೀಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಅತಿಯಾಗಿ ಬಾಧಿಸುವಂತಹ ಹಾಗೂ ಜಗತ್ತಿನ ಮೇಲೂ ಪ್ರತಿಕೂಲ ಬೀರುವಂತಹ ಸಂಕೀರ್ಣ ಸವಾಲುಗಳ ಕುರಿತು ಈ ಹಿಂದಿನ ಶೃಂಗಗಳಲ್ಲಿ ಆಗಿರುವ ಚರ್ಚೆಗಳನ್ನು ಮತ್ತಷ್ಟು ವಿಸ್ತರಿಸಲು ಈ ಶೃಂಗವು ವೇದಿಕೆಯಾಗಲಿದೆ. ಶೃಂಗದಲ್ಲಿ, ಜಾಗತಿಕ ದಕ್ಷಿಣದ ದೇಶಗಳು ಅಭಿವೃದ್ಧಿಯ ಕ್ಷೇತ್ರದಲ್ಲಿ ಗ್ಲೋಬಲ್ ಸೌತ್ ಎದುರಿಸುತ್ತಿರುವ ಸವಾಲುಗಳು, ಆದ್ಯತೆಗಳು ಮತ್ತು ಪರಿಹಾರಗಳ ಕುರಿತು ಸಮಾಲೋಚನೆ ನಡೆಸಲಿವೆ.

4. ಈ ಹಿಂದಿನ ಎರಡು ಶೃಂಗಗಳಂತೆಯೇ, 3ನೇ ವಿಒಜಿಎಸ್‌ಎಸ್ ಅನ್ನೂ ವರ್ಚುವಲ್ ಸ್ವರೂಪದಲ್ಲೇ ಆಯೋಜಿಸಲಾಗುತ್ತಿದ್ದು, ಇದನ್ನು ನಾಯಕರ ಅಧಿವೇಶನ ಮತ್ತು ಸಚಿವರ ಅಧಿವೇಶನ ಎಂಬಂತೆ ವಿಭಾಗಿಸಲಾಗಿದೆ. ಉದ್ಘಾಟನಾ ಸಮಾರಂಭವು ದೇಶದ ಮುಖ್ಯಸ್ಥರು/ಸರ್ಕಾರದ ಮಟ್ಟದಲ್ಲಿ ನಡೆಯಲಿದ್ದು, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಆತಿಥ್ಯ ವಹಿಸಲಿದ್ದಾರೆ. ಉದ್ಘಾಟನಾ ನಾಯಕರ ಅಧಿವೇಶನದ ಥೀಮ್ ಕೂಡ ಶೃಂಗದ "ಸುಸ್ಥಿರ ಭವಿಷ್ಯಕ್ಕಾಗಿ ಸಬಲೀಕರಣಗೊಂಡ ಜಾಗತಿಕ ದಕ್ಷಿಣ" ಎಂಬ ಥೀಮ್ ಅನ್ನೇ ಹೊಂದಿದೆ.

5. ಇದರ ಜೊತೆಗೆ, 10 ಸಚಿವರ ಸೆಷನ್‌ಗಳೂ ನಡೆಯಲಿದ್ದು, ಅವುಗಳ ಥೀಮ್‌ಗಳು ಈ ಕೆಳಗಿನಂತಿರಲಿವೆ:

i.  "ಜಾಗತಿಕ ದಕ್ಷಿಣಕ್ಕಾಗಿ ವಿಶಿಷ್ಟ ಮಾದರಿಯನ್ನು ರೂಪಿಸುವುದು" ಎಂಬ ಥೀಮ್‌ನಲ್ಲಿ ವಿದೇಶಾಂಗ ಸಚಿವರ ಅಧಿವೇಶನ.

ii. "ಒಂದು ವಿಶ್ವ- ಒಂದು ಆರೋಗ್ಯ" ಥೀಮ್‌ನಲ್ಲಿ ಆರೋಗ್ಯ ಸಚಿವರ ಅಧಿವೇಶನ

iii. "ಉತ್ತಮ ಭವಿಷ್ಯಕ್ಕಾಗಿ ಯುವಜನತೆಯ ಪಾಲ್ಗೊಳ್ಳುವಿಕೆ" ಥೀಮ್‌ನಡಿ ಯುವ ಸಚಿವರ ಅಧಿವೇಶನ

iv. "ಅಭಿವೃದ್ಧಿಗಾಗಿ ವ್ಯಾಪಾರ-ಜಾಗತಿಕ ದಕ್ಷಿಣದ ದೃಷ್ಟಿಕೋನಗಳು" ಥೀಮ್‌ನಡಿ ವಾಣಿಜ್ಯ/ವ್ಯಾಪಾರ ಸಚಿವರ ಅಧಿವೇಶನ

v. "ಅಭಿವೃದ್ಧಿಗಾಗಿ ಡಿಪಿಐ – ಒಂದು ಜಾಗತಿಕ ದಕ್ಷಿಣ ವಿಧಾನ" ಥೀಮ್‌ನಡಿ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರ ಅಧಿವೇಶನ

vi. "ಜಾಗತಿಕ ಹಣಕಾಸು ವ್ಯವಸ್ಥೆಗೆ ಜನ-ಕೇಂದ್ರಿತ ವಿಧಾನ" ಕುರಿತು ಹಣಕಾಸು ಸಚಿವರ ಅಧಿವೇಶನ

vii. "ಜಾಗತಿಕ ದಕ್ಷಿಣ ಮತ್ತು ಜಾಗತಿಕ ಆಡಳಿತ" ಕುರಿತ 2ನೇ ವಿದೇಶಾಂಗ ಸಚಿವರ ಅಧಿವೇಶನ

viii. "ಸುಸ್ಥಿರ ಭವಿಷ್ಯಕ್ಕಾಗಿ ಸುಸ್ಥಿರ ಇಂಧನ ಪರಿಹಾರಗಳು" ಥೀಮ್‌ನಡಿ ಇಂಧನ ಸಚಿವರ ಅಧಿವೇಶನ

ix. "ಮಾನವ ಸಂಪನ್ಮೂಲ ಅಭಿವೃದ್ಧಿಗೆ ಆದ್ಯತೆ: ಜಾಗತಿಕ ದಕ್ಷಿಣದ ಒಂದು ದೃಷ್ಟಿಕೋನ" ಕುರಿತ ಶಿಕ್ಷಣ ಸಚಿವರ ಅಧಿವೇಶನ

x. "ಪ್ರಗತಿಯ ಹಾದಿ- ಹವಾಮಾನ ಬದಲಾವಣೆ ನಿಯಂತ್ರಿಸುವಲ್ಲಿ ಜಾಗತಿಕ ದಕ್ಷಿಣದ ದೃಷ್ಟಿಕೋನ" ಕುರಿತ ಪರಿಸರ ಸಚಿವರ ಅಧಿವೇಶನ.

**ನವದೆಹಲಿ**

**ಆಗಸ್ಟ್ 14, 2024**